ಸಾಹಿತ್ಯದ ತಿರುಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಬಂದ ಹಲವು ಅನುವಾದಗಳ ಮೂಲಕ ತಿಳಿದುಕೊಳ್ಳಬಹುದು. ತೀನಂಶ್ರೀಯವರ 'ಭಾರತೀಯ ಕಾವ್ಯಮೀಮಾಂಸೆ'ಯಂತಹ ಆಚಾರ್ಯ ಕೃತಿ ಕೂಡ ಕನ್ನಡದಲ್ಲಿದೆ.

ಹಾಗೆಯೇ ಪಾಶ್ಚಿಮಾತ್ಯ ಸಾಹಿತ್ಯ ಹಾಗೂ ವಿಮರ್ಶಾ ಮೀಮಾಂಸೆಗಳನ್ನು ಅರಿಯಲು ಕನ್ನಡದಲ್ಲಿ ಎಲ್.ಎಸ್.ಶೇಷಗಿರಿರಾವ್, ವಿ.ಎಂ. ಇನಾಂದಾರ್, ಎಸ್.ವಿ. ರಂಗಣ್ಣ, ಪ್ರೊ. ಯರತೆಲವಿನಮಠ ಮೊದಲಾದವರ ಕೃತಿಗಳಿವೆ. ಎಲ್.ಎಸ್.ಎಸ್. ಅವರು ವಿಶ್ಲೇಷಣಾತ್ಮಕ ಹಾಗೂ ಹಲವು ಕಡೆ ತೌಲನಿಕ ನೆಲೆಗಳಲ್ಲಿ ಗ್ರೀಕ್, ಯುರೋಪ್ ಹಾಗೂ ಇಂಗ್ಲಿಷ್ ಸಾಹಿತ್ಯ ಹಾಗೂ ವಿಮರ್ಶಾ ತತ್ವಗಳನ್ನು ಪರಿಚಯಿಸುತ್ತಾರೆ. ಎಲ್.ಎಸ್.ಎಸ್. ವಿಮರ್ಶಾ ಸ್ವರೂಪವನ್ನು ಈ ಲೇಖನದ ಮಿತಿಯೊಳಗೆ ಅರಿಯುವುದು ಅವರನ್ನು ಶತಮಾನೋತ್ಸವ ಸಂದರ್ಭದಲ್ಲಿ ನೆನಪಿಸಿಕೊಳ್ಳುವ ಸರಿಯಾದ ಕ್ರಮವಾಗಿದೆ.

ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು ಹಲವು ವಿಮರ್ಶಾ ಕೃತಿಗಳ ಮೂಲಕ ನೀಡಿದ ಕೊಡುಗೆಯನ್ನು ಎಲ್.ಎಸ್.ಎಸ್. ಅವರ ವಿಮರ್ಶಾ ವಾಙ್ಮಯ ಎನ್ನಬೇಕು. ಅದರಲ್ಲಿ ಗ್ರೀಕ್, ಪಾಶ್ಚಾತ್ಯ, ಅಮೆರಿಕನ್ ಹಾಗೂ ಇಂಗ್ಲಿಷ್ ಸಾಹಿತ್ಯಗಳ ವಿಮರ್ಶಾ ಕೊಡುಗೆ ದೊಡ್ಡದು. ಅವರ ಅಂತಹ ಎಲ್ಲಾ ಬರಹಗಳ ಹಿಂದೆ ಕನ್ನಡವನ್ನು ಸಮೃದ್ಧಿಗೊಳಿಸುವ ಉದ್ದೇಶವಿದೆ. ಆದುದರಿಂದ ಇಂದು ಕನ್ನಡ ಸಾಹಿತ್ಯದ ಗಂಭೀರ ವಿದ್ಯಾರ್ಥಿಗಳಿಗೆ ಇಂಗ್ಲಿಷ್, ಅಮೆರಿಕನ್, ಯುರೋಪಿಯನ್ ಹಾಗೂ ಗ್ರೀಕ್ ಸಾಹಿತ್ಯಗಳ ಗಂಭೀರ ಅಧ್ಯಯನಕ್ಕೆ ಎಲ್.ಎಸ್.ಎಸ್. ಕೃತಿಗಳು ಮುಖ್ಯವಾದ ಆಕರಗ್ರಂಥಗಳಾಗಿವೆ. ಅವರ ವಿಶ್ಲೇಷಣಾತ್ಮಕ ಹಾಗೂ ತೌಲನಿಕ ವಿಧಾನಗಳು ಸೂಕ್ತ ಮಾರ್ಗದರ್ಶಿಯಾಗಿಯೂ ಕೆಲಸ ಮಾಡುತ್ತವೆ.

ಹಲವು ವಿವರಗಳ ಮೂಲಕ ಅವರು ಗ್ರೀಕ್ ಸಾಹಿತ್ಯದ ಸಮಗ್ರ ಚಿತ್ರಣ ನೀಡುತ್ತಾರೆ. ಬಳಿಕ ಗ್ರೀಕ್ ಸಾಹಿತ್ಯದ ಐದು ಆಧಾರ ಸ್ತಂಭಗಳ ವಿವರ ವಿಶ್ಲೇಷಣೆಗಳ ಮೂಲಕ ವಿಚಾರಗಳನ್ನು ಒಂದು ಚೌಕಟ್ಟಿಗೆ ತರುತ್ತಾರೆ. ಅವುಗಳೆಂದರೆ:

1. ಮನುಷ್ಯನ ಬೆರಗು ಮತ್ತು ಅದು ಪರಿವರ್ತನೆಗೊಂಡು ಮುಂದೆ ಅದನ್ನು ತಿಳಿಯುವ, ಅರಿಯುವ ಮನೋಭಾವ.
2. ತಿಳಿಯುವ ಕ್ರಮದಲ್ಲಿ ಬೆಳೆಯುವ ಪ್ರಶ್ನಿಸುವ ಮನೋಭಾಗ.
3. ಗ್ರೀಕರಲ್ಲಿ ವೈಜ್ಞಾನಿಕ ತಿಳಿವಳಿಕೆಯ ಆವಿರ್ಭಾವಕ್ಕೆ ಕಾರಣವಾದ, ಮನುಷ್ಯನ ಬುದ್ಧಿಶಕ್ತಿ ಮತ್ತು ತರ್ಕದಲ್ಲಿರುವ ವಿಶ್ವಾಸ.
4. ಕಲೆಗಳ ಮೂಲಕ ಗ್ರೀಕರು ಸಾಧಿಸಿಕೊಂಡ ಸೌಂದರ್ಯ ಪ್ರಜ್ಞೆ.
5. ಪ್ರಕೃತಿಯಲ್ಲಿ ಮನುಷ್ಯನಿಗೆ ಅಂದರೆ ವ್ಯಕ್ತಿಗೆ ಇರುವ ಮಹತ್ವ.

ಗ್ರೀಕರದ್ದು ಪ್ರಶ್ನಿಸುವ ಮನೋಭಾವ ಶೋಧನೆ, ಅನ್ವೇಷಣೆ, ಉತ್ತರಗಳನ್ನು ಹುಡುಕುವ ಮನೋಧರ್ಮವನ್ನು ಸೃಷ್ಟಿಸಿತು. ಈ ಶೋಧನೆಯ ಹಿಂದಿರುವುದು ಮನುಷ್ಯನ ಬುದ್ಧಿಶಕ್ತಿಯಲ್ಲಿ ಇರುವ ಅಪಾರ ವಿಶ್ವಾಸ. ಕನ್ನಡದಲ್ಲಿ ಬಿ.ಎಂ.ಶ್ರೀ. ಕಾಲದಿಂದ ಬೆಳೆದು ಬಂದ ಗ್ರೀಕ್ ದುರಂತ ಪ್ರಜ್ಞೆಯ ತಿಳಿವಳಿಕೆಯನ್ನು ಎಲ್.ಎಸ್.ಎಸ್. ಅವರು ಕನ್ನಡ ಸಾಹಿತ್ಯದ ತೌಲನಿಕ ನೆಲೆಯಲ್ಲಿಯೂ ವಿವರಿಸುತ್ತಾರೆ.

ಕುವೆಂಪು ಹಾಗೂ ಹೋಮರನ ಹೋಲಿಕೆ ಮೂಲಕ ಎಲ್.ಎಸ್.ಎಸ್. ಈ ಅಧ್ಯಯನಕ್ಕೆ ಹಲವು ಒಳನೋಟಗಳನ್ನು ನೀಡುತ್ತಾರೆ. ಅದನ್ನವರು ಮಾನವಾತೀತ ಜಗತ್ತನ್ನು ಕಾಣುವ ಕ್ರಮದಲ್ಲಿ ಹೋಮರ್‌ನಿಗೂ ಕುವೆಂಪು ಅವರಿಗೂ ಇರುವ ವ್ಯತ್ಯಾಸಗಳನ್ನು ಗುರುತಿಸಿ ಅವರು ವಿವರಿಸುತ್ತಾರೆ. ಎಲ್.ಎಸ್.ಎಸ್. ಅವರಿಗೆ ಟಾಗೊರಸನ 'Man is the measure of all things' ಅಥವಾ ಸಾಫೋಕ್ಲಿಸನ 'Of all the wonders on earth, the greatest is man' ಎಂಬಂತಹ ಬೀಜವಾಕ್ಯಗಳು ಲಕ್ಷಣ ನಿರ್ದೇಶಕ (defining) ಸೂತ್ರಗಳು.

ಕುವೆಂಪು ಅವರಿಗೆ ಮೂರ್ತ-ಅಮೂರ್ತಗಳಲ್ಲಿ ತಾತ್ವಿಕ ಭೇದವಿಲ್ಲ. 'ಜನಜೀವನವನ್ನು ಅಣಕಿಸುವಂತೆ ದಶರಥನ ದೇಹ ಬಿದ್ದಿತ್ತು', 'ಭಗವತ್ ಪ್ರೀತಿ ಭಕ್ತನ ಆತ್ಮವನ್ನೆತ್ತುವಂತೆ ರಾಮ ಶಬರಿಯನ್ನೆತ್ತಿದ', 'ಶಾಶ್ವತವನ್ನರಿಯಲು ನಶ್ವರದ ಹೃದಯ ಭೇದಿಸುವ ಕವಿಯ ದರ್ಶನದಂತೆ ಶ್ರೀರಾಮನ ಬಾಣ ಮಾರೀಚನನ್ನು ಭೇದಿಸಿತು' ಮೊದಲಾದ ಕುವೆಂಪು